Government of Karnataka
Department of Public Education
Office of the Deputy Director, Department of Public Instruction, BENGALURU SOUTH District

## Accreditation renewal certificate

No: 42262

Date: 22-Sep-2023

Subject: Within the Child Rights Education Act 2009 and Karnataka Education Act 1983 Regarding granting school recognition as per the rules framed.

- ----

In connection with the above matter, the Board of Directors of VASAVI EDUCATION TRUST 29200124429 The department officials have verified the documents submitted in the online application for renewal of the school recognition for English medium for VET SCHOOL 18, 14th Main, II Phase, J P Nagar, Bangalore -560078, Class 1 to 12, and have renewed the recognition as follows.

| Sl. No | Details | Application No.: 42262 |
|---|---|---|
| 1 | Name and Address of Governing Body | VASAVI EDUCATION TRUST |
| 2 | Name and address of the school | VET SCHOOL_18, 14th Main, |
| 3 | Dise Code Number: | 29200124429 |
| 4 | Class | 1 to 10 |
| 5 | Medium | English |
| 6 | Division | 10 |
| 7 | Type of School | Pvt. Unaided/Renewal Recognition |
| 8 | Year of Renewal of Accreditation | 2023-24 to 2027-28 |

Conditions:

1. The school has been registered under the Child Rights Education Act 2009, and the Karnataka Education Act 1983 and the rules made thereunder, and the recognition has been renewed up to the registered class. No additional classes and additional sections are permitted to be conducted outside these classes.

2. The school shall function under the Karnataka Education Act 1983 and the Child Rights in Education Act 2009, rules made thereunder.

3. Child Rights Education Act 2009 and the rules made thereunder, 25% seats will be reserved for children from weaker sections. The government will have the authority to enroll the seats reserved by the government for schools falling under the scope of RTE under RTE. [The government has made rules to facilitate enrollment in schools near the residence of the parents of the children, and accordingly, if there are government or government-aided educational institutions, the children will be enrolled in that school] In case there are no such schools, private schools will be allowed to enroll children enrolled by the government and continue their education up to the primary level. These children will be allowed to continue their studies without any discrimination.

4. As explained in Section 3, the Government shall waive the fees of the children enrolled under the RTE Act as per the rules. Therefore, it is prohibited to collect any fees from these children.

4. The school and the school management prohibit the collection of any capitation fees and voluntary donations from parents either at the time of registration or later.

6. The school/management board shall publish the information on the fees collected from the parents of the children in their school as tuition fees in the departmental bulletin board and on the school notice board as per the State Government Notification No.: ED:31:PGC:2019, Dated: 27.07.2019. No fee shall be collected in excess of the prescribed fee.

7. The school/management must enroll students within the period specified by the government.

8. The school/management cannot deny admission against the following factors.

I. Due to lack of proof of age.
II. On the basis of caste, religion, place of birth, language.
III. If admission is requested after the extended period of admission.

NOTARY
ARAVIND PATIL G.G.
Reg No
LAW LCL 169 2026
BENGALURU CITY
GOVT. OF KARNATAKA

9. All safety measures as per RTE Act and Rules, Karnataka Education Act and Rules. (Fire Safety and Building Safety Certificate from concerned authorities and Safety of Children's learning as per K.S.C.P.C.R and N.C.P.C.R).

10. The school / governing body is as follows:

I. No child admitted shall be held in any class or expelled from the school until he/she completes his/her primary and secondary education in the school.
II. No child shall be subjected to physical or mental abuse.
III. No child is required to pass any board examination until completion of primary education.
IV. Every child who completes primary education will be issued a certificate as prescribed under Rule 21 of the RTE and the Karnataka Education Act and Rules.
V. The school should also include children with special needs/special needs as per the provisions of the RTE Act and Rules and the Karnataka Education Act and Rules.
VI. The appointed teachers shall possess the minimum educational qualifications as prescribed for primary and secondary school teachers in the RTE Act and Rules and the Karnataka Education Act and Rules and Government Orders.
VII. The salary and allowances payable to the teachers and the terms and conditions of service shall be as prescribed by the State Government. The salary shall be paid to the teachers through Government Notification [Provident Fund (PF)] and other salaries payable by the bank and shall be covered by the Employee State Insurance (ESI).
VIII. Teachers shall perform the duties prescribed under Section 24[1] of the Act and the RTE Act and Rules and Rule 17 of the Karnataka Education Act and Rules and shall not engage themselves in private tuitions for supervisory considerations

11. Following the academic state curriculum and state text books to which the school is affiliated.

12. The school shall maintain the rules and norms as specified in Section 19 of the Karnataka Education Act. To appoint departmental staff as prescribed in the Karnataka Education Act and Rules.

13. School buildings and other infrastructure facilities related to the school should not be given over to any commercial activities or political and non-academic activities, day or night.

14. The school should not be run for the profit of any individual or group or association.

15. The school should be audited by a Chartered Accountant and a copy should be submitted to the Deputy Director/Field Education Officer by the end of June every year.

16. The school will follow the language policy as per the government notification (Kannada Language Policy 2016).

17. The governing body and teachers will act in accordance with the RTE Act and the Karnataka Education Act and rules.

18. The school/board of directors shall strictly follow the rules and directives of the government and the department.

19. It has been made mandatory to upload school information in SVTS by the end of March of every year as per the rules.

20. In case of violation of the above conditions, the school's recognition will be cancelled as per the rules framed under the RTE Act 2009 and the Karnataka Education Act 1983.

21. After the school accreditation process is completed, the entire document/information in the application submitted online by the governing body will be made publicly available on the Lakha' website.

22. In case of violation of the above conditions, the school's recognition will be cancelled as per the rules framed under the RTE Act 2009 and the Karnataka Education Act 1983.

Deputy Director (Administration)
Department of Public Education
BENGALURU SOUTH
(2920)

To,

1. Governing Body concerned VASAVI EDUCATION TRUST
2. Principal / 18, 14th Main,/ VET SCHOOL , SCHOOL & ADDRESS
3. Field Education Officers SOUTHI (292001) Taluk/Zone BENGALURU SOUTH (2920) District.
4. Office copy.

Digitally signed by NINGARAJAPPA KB

Date: 2023.10.03 17:24:25 +05:30

Translated from Kannada to English by

NOTARY
ARAVIND PATIL G.G.
Reg No
LAW LCL 169 2026
BENGALURU CITY
GOVT. OF KARNATAKA

TRANSLATED FROM
KANNADA TO ENGLISH
ARAVIND PATIL G.G. B.A., LL.B
ADVOCATE & NOTARY
GOVT. OF KARNATAKA
# 28, 12th Main, Near Old Sub Register Office
4th Block Jayanagar Bengaluru - 560 011

35

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಉಪನಿರ್ದೇಶಕರ ಕಛೇರಿ , ಸಾರ್ವಜನಿಕ ಶಿಕ್ಷಣ ಇಲಾಖೆ,BENGALURU SOUTH ಜಿಲ್ಲೆ

# ಮಾನ್ಯತೆ ನವೀಕರಣ ಪ್ರಮಾಣ ಪತ್ರ

ಸಂಖ್ಯೆ : 42262 ದಿನಾಂಕ : 22-Sep-2023

**ವಿಷಯ :** ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983 ಯೊಳಗೆ ರಚಿತವಾಗಿರುವ ನಿಯಮಗಳನ್ವಯ ಶಾಲಾ ಮಾನ್ಯತೆಯನ್ನು ನೀಡುವ ಬಗ್ಗೆ.

&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ **VASAVI EDUCATION TRUST** ಆಡಳಿತ ಮಂಡಳಿಯು **29200124429** ಡೈಸ್ ಕೋಡ್ ಸಂಖ್ಯೆ **V E T SCHOOL_18, 14th Main,** ಶಾಲೆಗೆ [ವಿಳಾಸ], 1_12 ತರಗತಿವರೆಗೆ **English** ಮಾಧ್ಯಮಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಲು ಆನ್ಲೈನ್ನಲ್ಲಿ ಸಲ್ಲಿಸಿದ್ದ ಅರ್ಜಿಯಲ್ಲಿನ ದಾಖಲೆಗಳನ್ನು ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ, ಈ ಕೆಳಕಂಡಂತೆ ಮಾನ್ಯತೆಯನ್ನು ನವೀಕರಿಸಿದೆ.

| ಕ್ರ.ಸಂ. | ವಿವರ | ಆನ್ಲೈನ್ ಅರ್ಜಿ ಸಂಖ್ಯೆ : 42262 |
|---|---|---|
| 1 | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ | **VASAVI EDUCATION TRUST** |
| 2 | ಶಾಲೆಯ ಹೆಸರು ಮತ್ತು ವಿಳಾಸ | **V E T SCHOOL_18, 14th Main,** |
| 3 | ಡೈಸ್ ಕೋಡ್ ಸಂಖ್ಯೆ: | **29200124429** |
| 4 | ತರಗತಿ | **1 to 10** |
| 5 | ಮಾಧ್ಯಮ | **English** |
| 6 | ವಿಭಾಗ | **10** |
| 7 | ಶಾಲಾ ವಿಧ | **Pvt. Unaided /Renewal Recognition** |
| 8 | ಮಾನ್ಯತೆ ನವೀಕರಿಸಿರುವ ವರ್ಷ | 2023 2024 ಸಾಲಿನಿಂದ 2027 2028 ರವರೆಗೆ |

ಷರತ್ತುಗಳು:

1. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009, ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಡಿಯಲ್ಲಿ ಹಾಗೂ ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಅನುಸಾರ ಶಾಲೆಯನ್ನು ನೋಂದಾಯಿಸಿ, ನೋಂದಾಯಿಸಿದ ತರಗತಿವರೆಗೆ ಮಾನ್ಯತೆಯನ್ನು ನವೀಕರಿಸಲಾಗಿದೆ. ಈ ತರಗತಿಗಳ ಹೊರತಾಗಿ ಹೆಚ್ಚುವರಿ ತರಗತಿಗಳನ್ನು ಮತ್ತು ಹೆಚ್ಚುವರಿ ವಿಭಾಗಗಳನ್ನು ನಡೆಸಲು ಅನುಮತಿ ಇರುವುದಿಲ್ಲ.

2. ಶಾಲೆಯು ಕರ್ನಾಟಕ ಶಿಕ್ಷಣ ಕಾಯ್ದೆ 1983 ಮತ್ತು ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುವುದು.

3. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಶೇಕಡಾ 25%ರಷ್ಟು ಸೀಟುಗಳನ್ನು ದುರ್ಬಲ ವರ್ಗದ ಮಕ್ಕಳಿಗೆ ಮೀಸಲಿಡುವುದು. ಆರ್.ಟಿ.ಇ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ಸರ್ಕಾರವು ಮೀಸಲಿಟ್ಟ ಸೀಟುಗಳನ್ನು ಆರ್.ಟಿ.ಇ ಅಡಿಯಲ್ಲಿ ದಾಖಲಿಸಲು ಅಧಿಕಾರ ಹೊಂದಿರುತ್ತದೆ [ಸರ್ಕಾರವು ಮಕ್ಕಳ ಪೋಷಕರು ವಾಸಿಸುವ ಅಕ್ಕ ಪಕ್ಕದ ಶಾಲೆಗಳಲ್ಲಿ ದಾಖಲಿಸಲು ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಿದ್ದು, ಅದರಂತೆ ಸರ್ಕಾರಿ, ಸರ್ಕಾರದಿಂದ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳು ಇದ್ದಲ್ಲಿ ಆ ಶಾಲೆಗೆ ಮಕ್ಕಳನ್ನು ದಾಖಲಿಸಲಾಗುವುದು] ಇಲ್ಲದಿದ್ದ ಪಕ್ಷದಲ್ಲಿ ಖಾಸಗಿ ಶಾಲೆಗಳು ಸರ್ಕಾರದಿಂದ ದಾಖಲಿಸುವ ಮಕ್ಕಳನ್ನು ದಾಖಲಿಸಿಕೊಂಡು ಪ್ರಾಥಮಿಕ ಹಂತದವರೆಗೆ ವಿದ್ಯಾಭ್ಯಾಸ ಮುಂದುವರೆಸಲು ಅವಕಾಶ ನೀಡುವುದು. ಈ ಮಕ್ಕಳನ್ನು ಯಾವುದೇ ತಾರತಮ್ಯವಿಲ್ಲದೆ ವ್ಯಾಸಂಗ ಮುಂದುವರೆಸಲು ಅವಕಾಶ ಕಲ್ಪಿಸುವುದು.

4. ಕಂಡಿಕೆ:3ರಲ್ಲಿ ವಿವರಿಸಿರುವಂತೆ ಆರ್.ಟಿ.ಇ ನಿಯಮದಡಿ ದಾಖಲಾದ ಮಕ್ಕಳ ಶುಲ್ಕಗಳನ್ನು ನಿಯಮಾನುಸಾರ ಸರ್ಕಾರವು ಬಿಡುಗಡೆ ಮಾಡುತ್ತದೆ. ಆದ್ದರಿಂದ ಈ ಮಕ್ಕಳಿಂದ ಯಾವುದೇ ಶುಲ್ಕವನ್ನು ವಸೂಲು ಮಾಡುವುದನ್ನು ನಿರ್ಭಂದಿಸಿದೆ.

5. ಶಾಲೆ ಮತ್ತು ಶಾಲೆಯ ಆಡಳಿತ ಮಂಡಳಿಯು ಯಾವುದೇ ತರವಾದ ಕ್ಯಾಪಿಟೇಷನ್ ಶುಲ್ಕವನ್ನು ಮತ್ತು ಸ್ವಇಚ್ಛೆಯಿಂದ ನೀಡುವ ಡೊನೇಷನ್ಗಳನ್ನು ಪೋಷಕರಿಂದ ದಾಖಲಾತಿ ಸಮಯದಲ್ಲಾಗಲೀ ಅಥವಾ ನಂತರದಲ್ಲಾಗಲೀ ಯಾವುದೇ ರೀತಿಯಾಗಿ ವಸೂಲು ಮಾಡುವುದನ್ನು ನಿರ್ಭಂದಿಸಿದೆ.

6. ಶಾಲೆಯು / ಆಡಳಿತ ಮಂಡಳಿಯು ತಮ್ಮ ಶಾಲೆಯಲ್ಲಿ ಮಕ್ಕಳ ಪೋಷಕರಿಂದ ವ್ಯಾಸಂಗ ಶುಲ್ಕವಾಗಿ ವಸೂಲು ಮಾಡುವ ಶುಲ್ಕದ ಮಾಹಿತಿಯನ್ನು ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ:31:ಪಿಜಿಸಿ:2019, ದಿನಾಂಕ:27.07.2019ರನ್ವಯ ಮಾಹಿತಿಗಳನ್ನು ಇಲಾಖಾ ವೆಬ್ಸೈಟ್ನಲ್ಲಿ ಹಾಗೂ ಶಾಲಾ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ.

7. ಶಾಲೆಯು / ಆಡಳಿತ ಮಂಡಳಿಯು ವಿದ್ಯಾರ್ಥಿಗಳನ್ನು ಸರ್ಕಾರವು ನಿಗದಿಪಡಿಸಿದೆ ಅವಧಿಯಲ್ಲಿಯೇ ದಾಖಲಾತಿ ಮಾಡಿಕೊಳ್ಳುವುದು.

8. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡ ಅಂಶಗಳ ವಿರುದ್ಧ ದಾಖಲಾತಿಯನ್ನು ನಿರಾಕರಿಸುವಂತಿಲ್ಲ.

(i) ವಯಸ್ಸಿನ ಪುರಾವೆ ಕೊರತೆಯಿಂದಾಗಿ.

(ii) ಜಾತಿ, ಧರ್ಮ, ಹುಟ್ಟಿದ ಸ್ಥಳ, ಭಾಷೆಯ ಆಧಾರದ ಮೇಲೆ.

(iii) ಪ್ರವೇಶದ ವಿಸ್ತೃತ ಅವಧಿಯ ನಂತರ ಪ್ರವೇಶವನ್ನು ಕೋರಿದರೆ.

9. ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು, ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು. [ಸಂಬಂಧಿಸಿದ ಪ್ರಾಧಿಕಾರಗಳಿಂದ ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ಹಾಗೂ K.S.C.P.C.R ಮತ್ತು N.C.P.C.R ಪ್ರಕಾರ ಮಕ್ಕಳ ಕಲಿಕೆಯ ಸುರಕ್ಷತೆ].

10. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡಂತೆ

(i) ಪ್ರವೇಶ ಪಡೆದ ಯಾವುದೇ ಮಗುವನ್ನು ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಯಾವುದೇ ತರಗತಿಯಲ್ಲಿ ಹಿಡಿದಿಟ್ಟುಕೊಳ್ಳಬಾರದು ಅಥವಾ ಶಾಲೆಯಿಂದ ಹೊರಹಾಕಬಾರದು.

(ii) ಯಾವುದೇ ಮಗುವನ್ನು ದೈಹಿಕ ಅಥವಾ ಮಾನಸಿಕವಾಗಿ ಕಿರುಕುಳಕ್ಕೆ ಒಳಪಡಿಸಬಾರದು.

(iii) ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಯಾವುದೇ ಮಗು ಯಾವುದೇ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಗತ್ಯವಿಲ್ಲ.

(iv) ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಪ್ರತಿ ಮಗುವಿಗೆ ಆರ್.ಟಿ.ಇ ನಿಯಮ 21 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ನಿಗದಿಪಡಿಸಿದಂತೆ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

(v) ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಬಂಧನೆಗಳ ಪ್ರಕಾರ ಶಾಲೆಯು ವಿಶೇಷ ಅಗತ್ಯತೆಗಳು / ವಿಶೇಷ ಮಕ್ಕಳನ್ನು ಹೊಂದಿರುವ ಮಕ್ಕಳನ್ನು ಸಹ ಸೇರಿಸಿಕೊಳ್ಳಬೇಕು.

(vi) ನೇಮಕಗೊಂಡ ಶಿಕ್ಷಕರು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಹಾಗೂ ಸರ್ಕಾರಿ ಆದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ನಿಗದಿಪಡಿಸಿದಂತೆ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು.

(vii) ಶಿಕ್ಷಕರಿಗೆ ಪಾವತಿಸಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಸೇವಾ ನಿಯಮಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ಸೂಚಿಸಿದಂತೆ ಇರುತ್ತದೆ. ಮತ್ತು ಸರ್ಕಾರಿ ಅಧಿಸೂಚನೆ [ಭವಿಷ್ಯ ನಿಧಿ (Pಈ)] ಮತ್ತು ಪಾವತಿಸಬೇಕಾದ ಬ್ಯಾಂಕ್ ಮತ್ತು ಇತರ ವೇತನಗಳ ಮೂಲಕ ಶಿಕ್ಷಕರಿಗೆ ವೇತನವನ್ನು ಪಾವತಿಸಲಾಗುತ್ತದೆ. ಮತ್ತು ಉದ್ಯೋಗಿ ರಾಜ್ಯ ವಿಮೆಗೆ (ಇSI) ಒಳಪಡಿಸುತ್ತದೆ.

(viii) ಶಿಕ್ಷಕರು ಕಾಯ್ದೆ ಸೆಕ್ಷನ್ 24[1] ಮತ್ತು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಯಮ 17ರ ಅಡಿಯಲ್ಲಿ ಸೂಚಿಸಲಾದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ ಮತ್ತು ಮೇಲ್ವಿಚಾರಣೆ ಪರಿಗಣನೆಗಳಿಗಾಗಿ ಖಾಸಗಿ ಟ್ಯೂಷನ್ಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ.

11. ಶಾಲೆಯು ಸಂಯೋಜಿತವಾಗಿರುವ ಶೈಕ್ಷಣಿಕ ರಾಜ್ಯ ಪಠ್ಯಕ್ರಮ ಮತ್ತು ರಾಜ್ಯ ಪಠ್ಯ ಪುಸ್ತಕಗಳನ್ನು ಅನುಸರಿಸುವುದು.

12. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್ 19ರಲ್ಲಿ ನಿರ್ದಿಷ್ಟಪಡಿಸಿದಂತೆ ಶಾಲೆಯು ನಿಯಮಗಳು ಮತ್ತು ಮಾನದಂಡಗಳನ್ನು ನಿರ್ವಹಿಸುವುದು. ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಲ್ಲಿ ಸೂಚಿಸಿರುವಂತೆ ಇಲಾಖಾ ಸಿಬ್ಬಂದಿಗಳನ್ನು ನೇಮಿಸುವುದು.

13. ಶಾಲೆಗೆ ಸಂಬಂಧಿಸಿದ ಶಾಲಾ ಕಟ್ಟಡಗಳು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಹಗಲು ಅಥವಾ ರಾತ್ರಿಯಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಅಥವಾ ರಾಜಕೀಯ ಮತ್ತು ಶೈಕ್ಷಣಿಕೇತರ ಚಟುವಟಿಕೆಗಳಿಗೆ ನೀಡಬಾರದು.

14. ಶಾಲೆಯನ್ನು ಯಾವುದೇ ವ್ಯಕ್ತಿ ಅಥವಾ ಗುಂಪು ಅಥವಾ ಸಂಘದ ಲಾಭಕ್ಕಾಗಿ ನಡೆಸಬಾರದು.

15. ಶಾಲೆಯನ್ನು ಚಾರ್ಟೆಡ್ ಅಕೌಂಟೆಂಟ್ನಿಂದ ಆಡಿಟ್ ಮಾಡಿಸಿ, ಪ್ರತಿಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.

16. ಸರ್ಕಾರಿ ಅಧಿಸೂಚನೆಯ [ಕನ್ನಡ ಭಾಷಾ ನೀತಿ 2016] ಪ್ರಕಾರ ಶಾಲೆಯು ಭಾಷಾ ನೀತಿಯನ್ನು ಅನುಸರಿಸುವುದು.

17. ಆರ್.ಟಿ.ಇ ಕಾಯ್ದೆ ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಆಡಳಿತ ಮಂಡಳಿ ಮತ್ತು ಶಿಕ್ಷಕರುಗಳು ಕಾರ್ಯನಿರ್ವಹಿಸುವುದು.

18. ಶಾಲೆ / ಆಡಳಿತ ಮಂಡಳಿಯು ಸರ್ಕಾರ ಮತ್ತು ಇಲಾಖೆಯ ನಿಯಮ ಮತ್ತು ನಿರ್ದೇಶನವನ್ನ ತಪ್ಪದೇ ಪಾಲಿಸುವುದು.

19. ಪ್ರತಿ ವರ್ಷದ ಮಾರ್ಚ್ ಅಂತ್ಯದ ಒಳಗಾಗಿ ಎಸ್.ಎ.ಟಿ.ಎಸ್ನಲ್ಲಿ ಶಾಲಾ ಮಾಹಿತಿಯನ್ನು ನಿಯಮನುಸಾರ ಅಪ್ಡೇಟ್ ಮಾಡುವುದನ್ನು ಕಡ್ಡಾಯಗೊಳಿಸಿದೆ.

20. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

21. ಶಾಲಾ ಮಾನ್ಯತೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಆಡಳಿತ ಮಂಡಳಿಯು ಆನ್ ಲೈನ್ ನಲ್ಲಿ ಸಲ್ಲಿಸಿದ ಅರ್ಜಿಯಲ್ಲಿನ ಸಂಪೂರ್ಣ ದಾಖಲೆ/ ಮಾಹಿತಿಗಳನ್ನು ಇಲಾಖಾ ವೆಬ್ ಸೈಟ್ ನಲ್ಲಿ ಸಾರ್ವಜನಿಕವಾಗಿ ವೀಕ್ಷಿಸಲು ಅನುವುಮಾಡಿಕೊಡಲಾಗುವುದು.

22. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

ಉಪನಿರ್ದೇಶಕರು(ಆಡಳಿತ)

ಸಾರ್ವಜನಿಕ ಶಿಕ್ಷಣ ಇಲಾಖೆ

BENGALURU SOUTH
(2920) ಜಿಲ್ಲೆ

ಗೆ,

1. ಸಂಬಂಧಿಸಿದ ಆಡಳಿತ ಮಂಡಳಿ VASAVI EDUCATION TRUST

2. ಮುಖ್ಯ ಶಿಕ್ಷಕರು, /18, 14th Main,/V E T SCHOOLಶಾಲೆ ಮತ್ತು ವಿಳಾಸ

3. ಕ್ಷೇತ್ರ ಶಿಕ್ಷಣಾಧಿಕಾರಿಗಳು,SOUTH1 (292001) ತಾಲ್ಲೂಕು/ವಲಯ BENGALURU SOUTH (2920) ಜಿಲ್ಲೆ.

4. ಕಛೇರಿ ಪ್ರತಿ.

Digitally signed by NINGARAJAPPA K B
Date: 2023.10.03 17:24:25 +05:30

Government of Karnataka-Department of Public Education
Field Education Officer's Office, South Zone-01,
Shankarapuram, Bangalore-560004

Form-3 (Rule-7)
Recognition certificate of educational institutions as per Rule 36(6)(b) of the Karnataka Education Act

No. A3/Anu.R.Pr.Sha.Ma. N./04/2018-19

Date: 12.09.2018

Vasavi Education Trust (R), No. 18, 14th Main Road, 1st Phase, J.P. Nagar, Bangalore-78, having examined the proposal submitted by V.E.T. English Primary School, J.P. Nagar, 14th Main Road, 2nd Phase, Bangalore-78, and based on the visit report/educational coordinator's report, the said school has been granted provisional recognition as Without-Aid till further orders, subject to the following conditions being fulfilled, as per Section 36(6)(b) of the Karnataka Education Act, 1983, and the Recognition Rules, 1999.

| Sl. No | Year in which accreditation is due for renewal | Accredited classes and departments | Name of the reviewing officer who checked the school's accreditation |
|---|---|---|---|
| 01 | 2018-19 to 2022-23 Recognition Without-Aid | It has accredited one section each in English medium for classes 1 to 7 | V.C. Basavarajegowda Field Education Officer Bangalore South Zone-01 |

Conditions:

- Strictly follow the rules of the Karnataka Education Act 1983, Karnataka Act of 1995 and the circulars and orders issued by the government and the department from time to time
- The Karnataka Educational Institutions, Classification, Control and Curriculum Fixation Rules, 1995, Government Notification No.: 116, Misc. 95, Date: 14-11-95, shall have school safety and basic amenities as per Rules 4, 5, 6 and 8.
- Karnataka Education Act 1983 Karnataka Act 1 of 1995 Karnataka Educational Institutions, Classification, Regulation and Syllabus Fixation Rules 1995 Government Notification No.: ED 116 Misc. 95 Date: 14-11-95. To collect only tuition fees, special development fees as per rule 10. And to take action as per rule 19(4).
- To submit the accounts of the previous year to the Registrar of Societies and file the documents as per Section 13 of the Karnataka State Association Registration Act 21 of 1960 Serial No. 9 of 1957. And to approve the documents of the list of members of the Executive Committee of the said organization and submit the receipt and approval list to this office within 30 days.
- Education Act 1983 Government Notification ED 131 Miscellaneous 98 Dated: 04-11-99 As per Rule 3 Sub-rule 2 of the Recognition Rules 1999 and the Director of Secondary Education Circular No.: 48(4)(7) 2 01/02-03 23: 13-12-02
- All information documents as per the checklist in Annexure 3 of Government Order No.: ED 44 SL B 2007 Dated: 03-09-2007 shall be maintained and these rules shall be strictly followed.
- Maintaining accounts and records as per the instructions of Government Notification No.: ED 74 Miscellaneous 2004 Bangalore Date: 14-08-2006.
- As per Rule 4(k) of Karnataka Educational Institutions Recognition Rules 1999 Government Notification No.: ED 131, Misc. 98 Dated: 04-11-99, if a minimum enrolment of 50 students is

NOTARY GOVT. OF KARNATAKA

M N Suryan

17 SEP 2026

shown for lower primary schools and 100 students for upper primary schools, then as per the rules.

- Accreditation will only be applicable if teachers have the prescribed and eligible qualifications as per government orders and departmental rules. Accreditation will be automatically cancelled in case of violation of the rules.
- For every teaching/non-teaching staff recruited in the school, service records containing service details should be opened and entries should be made and confirmed from time to time as per the instructions of Government Notification No. ED.104 S.E.P.E.2005 dated 12-01-2006.
- Teachers should be paid their salaries through bank savings accounts as per government orders. Cash should not be given for any reason. Teachers and staff on duty in the school should be provided with service security as per government order dated 12.01.2006.
- Bangalore City Police Commissioner, Infantry Road, Bangalore, vide Order No.: 157 MAG (1) Miscellaneous/2014 dated: 26-07-2014, to follow all measures related to the safety of children. To provide all physical facilities as prescribed by the department.
- In case of transfer of the institution or relocation of the school since its inception, this order shall come into force only if the said school has been newly registered and first recognized as per the Education Act and has obtained recognition from time to time. This recognition order shall stand cancelled automatically even if any rule is violated in this regard.
- All child safety measures must be taken as per the rules.
- The said school should be registered under RTE.
- No physical punishment should be given to school children.
- Fire extinguishers should be installed.
- If unauthorized classes are started, the school's registration and accreditation will be automatically cancelled and the governing body will be liable for any disciplinary action taken by the department.
- It is mandatory to post a no smoking notice board within 200 meters of the school.
- The stairs leading to the upper floors of the school should not be narrow. If safety walls are not built on each floor or if the walls are very small, precautions should be taken. At least 5 feet of retaining walls should be ensured. Grills should be installed so that there is no obstruction to the ventilation system.
- The accreditation of this school has been temporarily renewed in the interest of the educational welfare of the children enrolled and studying under the RTE.
- All basic facilities to be provided to the school must be provided. Otherwise, this order will be automatically cancelled.

-/Sd/-
(V.C.Basavarajegowda)
Field Education Officers
Bangalore South Zone-01

To:

1. Respectfully submitted, Deputy Director, Public Works Department, Bangalore South District, Bangalore.
2. Secretaries/Principals V.E.T. English Primary School, J.P. Nagar, 14th Main Road, 2nd Stage JP Nagar, Bangalore-78.
3. Office Copy.

Translated from Kannada to English by

NOTARY ★ GOVT. OF KARNATAKA ★ ARAVIND PATIL G.G. BENGALURU CITY

TRANSLATED FROM KANNADA TO ENGLISH 17/9/24

ARAVIND PATIL G.G. B.A., LL B
ADVOCATE & NOTARY
GOVT. OF KARNATAKA
# 28, 12th Main, Near Old Sub Register Office
4th Block Jayanagar Bengaluru - 560 011

17 SEP 2026

ಕರ್ನಾಟಕ ಸರ್ಕಾರ-ಸಾರ್ವಜನಿಕ ಶಿಕ್ಷಣ ಇಲಾಖೆ

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ದಕ್ಷಿಣ ವಲಯ-01, ಶಂಕರಪುರಂ, ಬೆಂಗಳೂರು-560004

## ನಮೂನೆ-3 (ನಿಯಮ-7)

### ಕರ್ನಾಟಕ ಶಿಕ್ಷಣ ಕಾಯಿದೆ ನಿಯಮ 36(6)(ಬಿ)ರಂತೆ ಶಿಕ್ಷಣ ಸಂಸ್ಥೆಗಳ ಮಾನ್ಯತೆ ಪ್ರಮಾಣ ಪತ್ರ

ಸಂಖ್ಯೆ:ಅ3/ಅನು.ರ.ಪ್ರಾ.ಶಾ.ಮಾ.ನ./04/2018-19 ದಿನಾಂಕ:12.09.2018

ವಾಸವಿ ಎಜುಕೇಷನ್ ಟ್ರಸ್ಟ್ (ರಿ), ನಂ. 18, 14ನೇ ಮುಖ್ಯರಸ್ತೆ, 1ನೇ ಹಂತ, ಜೆ.ಪಿ.ನಗರ, ಬೆಂಗಳೂರು-78 ಇವರ ವತಿಯಿಂದ ನಡೆಯುತ್ತಿರುವ ವಿ.ಇ.ಟಿ.ಆಂಗ್ಲ ಪ್ರಾಥಮಿಕ ಶಾಲೆ, ಜೆ.ಪಿ.ನಗರ, 14ನೇ ಮುಖ್ಯರಸ್ತೆ, 2ನೇ ಹಂತ, ಬೆಂಗಳೂರು-78 ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಭೇಟಿ ವರದಿ/ಶಿಕ್ಷಣ ಸಂಯೋಜಕರ ವರದಿಯನ್ನು ಆಧರಿಸಿ, ಸದರಿ ಶಾಲೆಗೆ ತಾತ್ಕಾಲಿಕ ಮಾನ್ಯತೆಯನ್ನು ಅನುದಾನ ರಹಿತವಾಗಿ (Without-Aid) ಮುಂದಿನ ಆದೇಶದವರೆಗೆ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆ ಮೇರೆಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 36(6)(ಬಿ), ಮಾನ್ಯತೆ ನಿಯಮಗಳು 1999ರ ನಿಯಮಗಳನ್ವಯ ಮಾನ್ಯತೆ ನೀಡಲಾಗಿದೆ.

| ಕ್ರ ಸಂ | ಮಾನ್ಯತೆ ನವೀಕರಿಸಬೇಕಾದ ವರ್ಷ | ಮಾನ್ಯತೆನೀಡಿದತರಗತಿ ಮತ್ತು ವಿಭಾಗಗಳು | ಶಾಲೆಯ ಮಾನ್ಯತೆ ಬಗ್ಗೆ ಪರಿಶೀಲಿಸಿದ ಪರಿಶೀಲನಾಧಿಕಾರಿಯವರ ಹೆಸರು |
|---|---|---|---|
| 01 | 2018-19 ರಿಂದ 2022-23ನೇ ಸಾಲಿಗೆ ಅನುದಾನ ರಹಿತವಾಗಿ ಮಾನ್ಯತೆ (Without-Aid) | 1 ರಿಂದ 7 ನೇ ತರಗತಿಗೆ ಆಂಗ್ಲ ಮಾಧ್ಯಮದಲ್ಲಿ ತಲಾ ಒಂದು ವಿಭಾಗಕ್ಕೆ ಮಾನ್ಯತೆ ನೀಡಿದೆ. | ವಿ.ಸಿ.ಬಸವರಾಜೇಗೌಡ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೆಂಗಳೂರು ದಕ್ಷಿಣ ವಲಯ-01 |

ಷರತ್ತುಗಳು:

- ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ನಿಯಮಗಳು ಹಾಗೂ ಸರ್ಕಾರಿ ಮತ್ತು ಇಲಾಖೆಯಿಂದ ಕಾಲಕಾಲಕ್ಕೆ ನೀಡುವ ಸುತ್ತೋಲೆ ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
- ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: 116 ವಿವಿಧ 95 ದಿನಾಂಕ: 14-11-95 ರ ನಿಯಮ 4, 5, 6 ಮತ್ತು 8 ರನ್ವಯ ಶಾಲಾ ಸುರಕ್ಷತೆ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿರತಕ್ಕದ್ದು.
- ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕಆಕ್ಟ್ 1 ಆಫ್ 1995 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 116 ವಿವಿಧ 95 ದಿನಾಂಕ: 14-11-95 ರ ನಿಯಮ 10 ರಂತೆ ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡುವುದು. ಹಾಗೂ ನಿಯಮ 19(4) ರಂತೆ ಕ್ರಮ ವಹಿಸುವುದು.
- ಕರ್ನಾಟಕ ರಾಜ್ಯದ ಸಂಘದ ನೊಂದಣಿ ಕಾಯ್ದೆ 21 1960 ಕ್ರಮ ಸಂಖ್ಯೆ 9 1957 ಅಧಿನಿಯಮ 13 ರ ಪ್ರಕರಣದಂತೆ ಹಿಂದಿನ ಸಾಲಿನವರೆಗಿನ ಲೆಕ್ಕ ಪತ್ರಗಳನ್ನು ಸಂಘಗಳ ನೊಂದಣಾಧಿಕಾರಿಗಳಿಗೆ ಸಲ್ಲಿಸಿ ದಾಸ್ತಾವೇಜುಗಳನ್ನು ದಾಖಲು ಪಡಿಸುವುದು. ಹಾಗೂ ಸದರಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯ ದಾಖಲೆಗಳನ್ನು ಅನುಮೋದಿಸಿಕೊಂಡು ಸ್ವೀಕೃತಿ ಹಾಗೂ ಅನುಮೋದನಾ ಪಟ್ಟಿಯನ್ನು 30 ದಿನಗಳ ಒಳಗಾಗಿ ಈ ಕಛೇರಿಗೆ ಮುದ್ದಾಂ ಸಲ್ಲಿಸುವುದು.
- ಶಿಕ್ಷಣ ಕಾಯ್ದೆ 1983 ಸರ್ಕಾರದ ಅಧಿಸೂಚನೆ ಇಡಿ 131 ವಿವಿಧ 98 ದಿನಾಂಕ: 04-11-99 ರ ಮಾನ್ಯತೆ ನಿಯಮ 1999 ರ ನಿಯಮ 3 ಉಪನಿಯಮ 2 ರಂತೆ ಹಾಗೂ ನಿರ್ದೇಶಕರು ಪ್ರಾಥಶಿಕ್ಷಣ ರವರ ಸುತ್ತೋಲೆ ಸಂಖ್ಯೆ: ಸಿ8(4)(7) ಪ್ರಾಶಿಅ ನಿ ಅ 01/02-03 ದಿನಾಂಕ: 13-12-02 ರ ನಿಯಮಗಳಂತೆ ಸ್ಥಿರನಿಧಿ ಠೇವಣಿಗಳನ್ನು ನಿಗಧಿಪಡಿಸಿರುವ ದರಗಳಲ್ಲಿ ಆಡಳಿತ ಮಂಡಳಿ ಕಾರ್ಯದರ್ಶಿಗಳು ಹಾಗೂ ಸೂಚಿತ ಅಧಿಕೃತ ಪ್ರಾಧಿಕಾರದ ಜಂಟಿ ಹೆಸರಿನಲ್ಲಿ ನಿರ್ವಹಿಸಿ ಕಾಲಕಾಲಕ್ಕೆ ನವೀಕರಣ ಮಾಡಿಸುತ್ತಿರಬೇಕು.
- ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಎಸ್‌ಎಲ್ ಬಿ 2007 ದಿನಾಂಕ: 03-09-2007 ರ ಅನುಬಂಧ 3 ರಲ್ಲಿನ ಚೆಕ್‌ಲಿಸ್ಟ್ ನಂತೆ ಎಲ್ಲಾ ಮಾಹಿತಿ ದಾಖಲೆಗಳನ್ನು ಹೊಂದಿರತಕ್ಕದ್ದು ಹಾಗೂ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
- ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ವಿವಿಧ 2004 ಬೆಂಗಳೂರು ದಿನಾಂಕ: 14-08-2006 ರ ಸೂಚನೆಗಳಂತೆ ಲೆಕ್ಕ ಪತ್ರಗಳು, ದಾಖಲೆಗಳನ್ನು ನಿರ್ವಹಿಸುವುದು.
- ಕರ್ನಾಟಕ ಶಿಕ್ಷಣ ಸಂಸ್ಥೆಗಳು ಮಾನ್ಯತೆ ನಿಯಮಗಳು 1999 ಸರ್ಕಾರದ ಅದಿಸೂಚನೆ ಸಂಖ್ಯೆ: ಇಡಿ 131 ವಿವಿಧ 98 ದಿನಾಂಕ: 04-11-99 ರ ನಿಯಮ 4 (ಕೆ) ರಂತೆ ಕಿರಿಯ ಪ್ರಾಥಮಿಕ ಶಾಲೆಗಳಿಗೆ 50 ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ 100 ವಿದ್ಯಾರ್ಥಿಗಳ ಕನಿಷ್ಠ ದಾಖಲಾತಿಯನ್ನು ನಿರ್ವಹಿಸಿರುವುದು. ನಿಯಮಗಳಲ್ಲಿ ನಿಗದಿಪಡಿಸಿದ ದಾಖಲಾತಿ/ಹಾಜರಾತಿಗಿಂತ ಕಡಿಮೆ ಇದ್ದು ಪ್ರಸ್ತಾವನೆಯಲ್ಲಿ ಹೆಚ್ಚಿನ ದಾಖಲಾತಿ ತೋರಿಸಿದಲ್ಲಿ ನಿಯಮಾನುಸಾರ ಮಾನ್ಯತೆ ತಂತಾನೆ ರದ್ದಾಗುತ್ತದೆ.

For V.E.T. SCHOOL

- ಸರ್ಕಾರಿ ಆದೇಶ ಹಾಗೂ ಇಲಾಖಾ ನಿಯಮಾನುಸಾರ ನಿಗದಿತ ಹಾಗೂ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಹೊಂದಿದ್ದಲ್ಲಿ ಮಾತ್ರ ಮಾನ್ಯತೆ ಅನ್ವಯಿಸಲಿದ್ದು ನಿಯಮ ಉಲಂಘನೆಯಾದಲ್ಲಿ ಮಾನ್ಯತೆ ತಂತಾನೆ ರದ್ದಾಗುತ್ತದೆ.
- ಶಾಲೆಯಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರತಿಯೊಬ್ಬ ಬೋಧಕ/ಬೋಧಕೇತರ ಸಿಬ್ಬಂದಿಗೂ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ.104 ಎಸ್.ಇ.ಟಿ.2005 ದಿ. 12-01-2006 ರ ಸೂಚನೆಗಳನ್ವಯ ಸೇವಾ ವಿವರಗಳನ್ನೊಳಗೊಂಡ ಸೇವಾ ವಹಿಗಳನ್ನು ತೆರೆದು ಕಾಲಕಾಲಕ್ಕೆ ನಮೂದನೆಗಳನ್ನು ನಮೂದಿಸಿ ದೃಢೀಕರಿಸಿರಬೇಕು.
- ಶಿಕ್ಷಕರಿಗೆ ಸರ್ಕಾರಿ ಆದೇಶಗಳಂತೆ ವೇತನಗಳನ್ನು ಬ್ಯಾಂಕ್ ಉಳಿತಾಯ ಖಾತೆಗಳ ಮೂಲಕ ಪಾವತಿ ಮಾಡತಕ್ಕದ್ದು; ಯಾವುದೇ ಕಾರಣಕ್ಕೆ ನಗದು ನೀಡತಕ್ಕದ್ದಲ್ಲ. ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಸಿಬ್ಬಂದಿಯವರಿಗೆ ದಿನಾಂಕ 12.01.2006 ರ ಸರ್ಕಾರದ ಆದೇಶದಂತೆ ಸೇವಾಭದ್ರತೆ ಒದಗಿಸಬೇಕು.
- ಬೆಂಗಳೂರು ನಗರ ಪೋಲೀಸ್ ಆಯುಕ್ತರು, ಇನ್‌ಫೆಂಟ್ರಿರಸ್ತೆ, ಬೆಂಗಳೂರು ರವರ ಆದೇಶ ಸಂಖ್ಯೆ: 157 ಎಂಎಪಿ(1)ಇತರೆ/2014 ದಿನಾಂಕ: 26-07-2014 ರನ್ವಯ ಮಕ್ಕಳ ಸುರಕ್ಷತೆಗೆ ಸಂಬಂದಿಸಿದಂತೆ ಎಲ್ಲಾ ಕ್ರಮಗಳನ್ನು ಅನುಸರಿಸುವುದು. ಇಲಾಖೆ ಗೊತ್ತುಪಡಿಸಿರುವ ಎಲ್ಲಾ ಭೌತಿಕ ಸೌಲಭ್ಯಗಳನ್ನು ಒದಗಿಸುವುದು.
- ಈ ಶಾಲೆ ಪ್ರಾರಂಭವಾದಗಿನಿಂದ ಸಂಸ್ಥೆ ಹಸ್ತಾಂತರ ಹಾಗೂ ಶಾಲೆ ಸ್ಥಳಾಂತರವಾಗಿದ್ದಲ್ಲಿ ಶಿಕ್ಷಣ ಕಾಯ್ದೆಯನುಸಾರ ಸದರಿ ಶಾಲೆಗೆ ಹೊಸದಾಗಿ ನೊಂದಣಿ ಪ್ರಥಮ ಮಾನ್ಯತೇ ಹಾಗೂ ಕಾಲಕಾಲಕ್ಕೆ ಮಾನ್ಯತೆಗಳನ್ನು ಪಡೆದಿದ್ದಲ್ಲಿ ಮಾತ್ರ ಈ ಆದೇಶ ಚಾಲ್ತಿಯಾಗುವುದು. ಈ ಸಂಬಂಧಯಾವುದೇ ನಿಯಮ ಉಲ್ಲಂಘನೆಯಾಗಿದ್ದರೂ ಈ ಮಾನ್ಯತೆ ಆದೇಶ ತಂತಾನೆ ರದ್ದಾಗುತ್ತದೆ.
- ನಿಯಮಾನುಸಾರ ಎಲ್ಲಾ ರೀತಿಯ ಮಕ್ಕಳ ಸುರಕ್ಷಿತಾ ಕ್ರಮಗಳನ್ನು ಕೈಗೊಳ್ಳಬೇಕು.
- ಆರ್.ಟಿ.ಇ. ಅಡಿಯಲ್ಲಿ ಸದರಿ ಶಾಲೆ ನೋಂದಣಿಯಾಗಿರಬೇಕು.
- ಶಾಲಾ ಮಕ್ಕಳಿಗೆ ಯಾವುದೇ ದೈಹಿಕ ದಂಡನೆಗಳನ್ನು ನೀಡಬಾರದು.
- ಅಗ್ನಿನಂದಕಗಳನ್ನು ಅಳವಡಿಸಿರಬೇಕು.
- **ಅನಧಿಕೃತ ತರಗತಿಗಳನ್ನು ಆರಂಭಿಸಿದರೆ ಶಾಲೆಯ ನೊಂದಣಿ ಮತ್ತು ಮಾನ್ಯತೆಯು ತಂತಾನೆ ರದ್ದಾಗುವುದಲ್ಲದೆ ಇಲಾಖೆ ತೆಗೆದುಕೊಳ್ಳುವ ಯಾವುದೇ ಶಿಸ್ತು ಕ್ರಮಕ್ಕೆ ಆಡಳಿತ ಮಂಡಳಿ ಬದ್ಧವಾಗಿರಬೇಕಾಗುತ್ತದೆ.**
- ಶಾಲೆಯ 200 ಮೀಟರ್ ಸುತ್ತಳತೆಯಲ್ಲಿ ಧೂಮಪಾನ ನಿಷೇದ ಪ್ರಕಟಣಾ ಫಲಕವನ್ನು ಕಡ್ಡಾಯವಾಗಿ ಹಾಕಬೇಕು.
- ಶಾಲೆಯ ಮೇಲಿನ ಅಂತಸ್ತುಗಳಿಗೆ ಹೋಗಬೇಕಾದ ಮೆಟ್ಟಲುಗಳು ಕಿರಿದು ಆಗಿರಬಾರದು. ಒಂದು ವೇಳೆ ಪ್ರತಿ ಮಹಡಿಗಳಲ್ಲಿ ಸುರಕ್ಷಿತ ಗೋಡೆಗಳನ್ನು ನಿರ್ಮಿಸದಿದ್ದಲ್ಲಿ ಅಥವಾ ತುಂಬಾ ಚಿಕ್ಕದಾದ ಗೋಡೆಗಳನ್ನು ನಿರ್ಮಾಣ ಮಾಡಿದ್ದಲ್ಲಿ ಈ ಬಗ್ಗೆ ಜಾಗರೂಕತಾ ಕ್ರಮ ಕೈಗೊಳ್ಳಬೇಕು. ಕೊನೆಯ ಪಕ್ಷ 5 ಅಡಿ ತಡೆ ಗೋಡೆಗಳು- ಇರುವಂತೆ ನೋಡಿಕೊಳ್ಳಬೇಕು. ಗಾಳಿ ಬೆಳಕಿನ ವ್ಯವಸ್ಥೆಗೆ ಅಡ್ಡಿ ಉಂಟಾಗದಂತೆ ಗ್ರಿಲ್‌ಗಳನ್ನು ಅಳವಡಿಸಬೇಕು.
- ಈ ಶಾಲೆಗೆ ಮಾನ್ಯತೆಯನ್ನು ಆರ್.ಟಿ.ಇ.ಅಡಿಯಲ್ಲಿ ದಾಖಲಾಗಿ ಓದುತ್ತಿರುವ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯತೆಯನ್ನು ತಾತ್ಕಲಿಕವಾಗಿ ನವೀಕರಿಸಿದೆ.
- ಶಾಲೆಗೆ ಕೊಡಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ಇಲ್ಲವಾದರೆ ಈ ಆದೇಶ ತಂತಾನೆ ರದ್ದಾಗುವುದು.

(ವಿ.ಸಿ.ಬಸವರಾಜೇಗೌಡ)
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಬೆಂಗಳೂರು ದಕ್ಷಿಣ ವಲಯ-01

ರವರಿಗೆ:

1. ಗೌರವಪೂರ್ವಕವಾಗಿ, ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ ಬೆಂಗಳೂರು ರವರ ಅವಗಾಹನೆಗೆ
2. ಕಾರ್ಯದರ್ಶಿಗಳು/ಮುಖ್ಯಶಿಕ್ಷಕರು ವಿ.ಇ.ಟಿ.ಆಂಗ್ಲ ಪ್ರಾಥಮಿಕ ಶಾಲೆ, ಜೆ.ಪಿ.ನಗರ, 14ನೇ ಮುಖ್ಯರಸ್ತೆ, 2ನೇ ಹಂತ, ಬೆಂಗಳೂರು-78
3. ಕಛೇರಿ ಪ್ರತಿ.

V.E.T. SCHOOL
No.16, 14th Main,
J.P. Nagar 2nd Phase, Bangalore-560 078.
Phone: 080-26585623

For V.E.T. SCHOOL
Principal

...with CamScanner

Bangalore City Zilla Panchayat

Office of the Deputy Director, Public Education Department, Kalasipalya, Bangalore -560002

Form-3

(As per Recognition Rule 4 of 1999)

No.Anu1/Ma.N.130/2018-19

Dated:01.10.2018

It is hereby certified that the V.E.T. English High School, J.P. Nagar, Bangalore, run by the Management Board of Vasavi Educational Trust, No.18, 14th Main Road, 2nd Phase, J.P. Nagar, Bangalore, has been granted unaided recognition under Section 36(6) of the Karnataka Education Act, 1983 (Karnataka Act 1-1995) on this date. Dated: 01-10-2018 subject to the following conditions

| Registration no | School Address | Accredited media | Is the school subsidized/unaided? | Year of accreditation | Accredited classes / departments | Name / Designation regarding accreditation |
|---|---|---|---|---|---|---|
| Commissioner's Office Letter No.: ONS53/1983 84 dated 21-7-1984 Form-9 Serial No : 159 dated 05-11-2005 | V.E.T. English High School,No.18, 14th Main Road, 2nd Phase,J.P. Nagar, Bangalore -78 | English | Unaided | From 2018-19 to 2022-2023 | 8. 9th & 10th class recognition renewal 01 section each, total 03 sections | Mr. Basavaraje Gowda. Field Education Officers, South Zone-1 |

Conditions:-

1. All provisions of the Education Act and government and departmental orders must be strictly followed.

2. Appointments shall be made in accordance with government orders.

3. Fees shall be collected only as per departmental rules and the accounts thereof shall be maintained and presented in the name of the school during school inspections.

4. The expired fixed fund should be renewed.

NOTARY
GOVT. OF KARNATAKA
ARAVIND PATIL G.B.
BENGALURU CITY

5.According to the Grants Code, the governing body must immediately fulfill all the requirements of the school.

6. Precautionary measures should be taken to make the school building free from fire and electrical accidents. Fire extinguishers should be installed.

7. Teaching activities shall be conducted only by teachers with prescribed qualifications.

8. It is mandatory to take action regarding the protection/safety of children.

9. Construction of school buildings/construction of rooms on the building and repair work should not be undertaken during school hours.

10. Paying the minimum salary of the pay scale applicable to their post to the school teaching/non-teaching staff. Salary through bank.

11. Compulsory installation of "fire extinguishers" in schools.

12. The instructions in the National Building Code of India 2005 regarding the building must be followed.

13. The number of students should be as per the Education Act and the curriculum prescribed by the department should be followed and taught and the necessary space, teaching aids, furniture and playground should be provided.

14. The audit report must be submitted to the concerned authority and approved as per the rules.

15. All the accreditation rules as per the Karnataka Education Act must be followed. Failure to do so will result in the accreditation being revoked as per the rules.

16. Enrolment of children as per the Right of the Child to Free and Compulsory Education Act, 2009 and as per the rules to be done.

17. Mandatory publication of information about school information and school student fees on a "6'x10" board.

18. The Hon'ble Director ( Secondary Education) has granted recognition subject to the condition of taking immediate steps to fill the information online and submit the report as per the memorandum No. C8(7)Ta .Shi.Aa.Ma.N/1/2015-16, dated 11-9-2018.

(S. Rajendra)
Deputy Director (Administration)
Bangalore South District

Copy:

1) For information to the Field Education Officers, Bangalore South Zone-1, Bangalore South District.

2) Secretary Vasavi Educational Trust, No.18, 14th Main Road, 2nd Stage, J.P. Nagar, Bangalore-78

3) Principal, V.E.T. English High School, J.P. Nagar, Bangalore

4) Office copy.

TRANSLATED FROM KANNADA TO ENGLISH

17/9/26

NOTARY * GOVT. OF KARNATAKA * ARAVIND PATIL G.G. REG. No. ... BENGALURU CITY

ARAVIND PATIL G.G. B.A., LL B
ADVOCATE & NOTARY
GOVT. OF KARNATAKA
#28, 12th Main, Near Old Sub Register Office
4th Block Jayanagar Bengaluru - 560 011

17 SEP 2026

::ಬೆಂಗಳೂರು ನಗರ ಜಿಲ್ಲಾ ಪಂಚಾಯತ್::

. ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ನಗರ ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ,ಬೆಂ-2 2152

## ನಮೂನೆ-3

(1999ರ ಮಾನ್ಯತೆ ನಿಯಮ 4 ರಂತೆ)

ದಿನಾಂಕ: 01-10-2018

ಸಂಖ್ಯೆ: ಅನು1/ಮಾ.ನ.130/2018-19

ವಾಸವಿ ಎಜುಕೇಷನಲ್ ಟ್ರಸ್ಟ್, ನಂ.18, 14ನೇ ಮುಖ್ಯರಸ್ತೆ, 2ನೇ ಹಂತ, ಜೆ.ಪಿ.ನಗರ, ಬೆಂಗಳೂರು-78 ಈ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ವಿ.ಇ.ಟಿ ಆಂಗ್ಲ ಪ್ರೌಢ ಶಾಲೆ, ಜೆ.ಪಿ.ನಗರ, ಬೆಂಗಳೂರು ಈ ಪ್ರೌಢಶಾಲೆಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ 1-1995) ಸೆಕ್ಷನ್ 36(6) ರಂತೆ ಈ ದಿನ ದಿ:01-10-2018 ರಂದು ಈ ಕೆಳಕಂಡ ಷರತ್ತುಗಳ ಮೇಲೆ ಅನುದಾನರಹಿತವಾಗಿ ಮಾನ್ಯತೆಯನ್ನು ನೀಡಿದೆ ಎಂದು ಪ್ರಮಾಣೀಕರಿಸಲಾಗಿದೆ.

| ನೋಂದಣಿ ಸಂಖ್ಯೆ | ಶಾಲೆಯ ವಿಳಾಸ | ಮಾನ್ಯತೆ ನೀಡಿರುವ ಮಾಧ್ಯಮ | ಶಾಲೆ ಅನುದಾನ ಸಹಿತವೇ/ ರಹಿತವೇ | ಮಾನ್ಯತೆ ನೀಡಿರುವ ವರ್ಷ | ಮಾನ್ಯತೆ ನೀಡಿರುವ ತರಗತಿಗಳು/ ವಿಭಾಗಗಳು | ಮಾನ್ಯತೆ ನೀಡುವ ಬಗ್ಗೆ ಶಿಫಾರಸ್ಸು ಮಾಡಿದ ಅಧಿಕಾರಿಗಳ ಹೆಸರು/ಪದನಾಮ |
|---|---|---|---|---|---|---|
| ಆಯುಕ್ತರ ಕಛೇರಿ ಪತ್ರ ಸಂ:ಇ7(ಹೆಚ್) ಓ.ಎಸ್.ಎಸ್ 53/ 1983-84 ದಿ:21-7-1984 ನಮೂನೆ-9ರ ಕ್ರಮ ಸಂಖ್ಯೆ:159 ದಿ:5-11-2005 | ವಿ.ಇ.ಟಿ ಆಂಗ್ಲ ಪ್ರೌಢ ಶಾಲೆ, ಜೆ.ಪಿ.ನಗರ, ಬೆಂಗಳೂರು | ಆಂಗ್ಲ | ಅನುದಾನ ರಹಿತವಾಗಿ | 2018-19 ರಿಂದ 2022-2023 ರವರೆಗೆ | 8ನೇ, 9ನೇ & 10ನೇ ತರಗತಿ ಮಾನ್ಯತೆ ನವೀಕರಣ ತಲಾ 01 ವಿಭಾಗದಂತೆ ಒಟ್ಟು 03 ವಿಭಾಗಗಳು | ಶ್ರೀ.ಬಸವರಾಜೇ ಗೌಡ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ದಕ್ಷಿಣ ವಲಯ-1 |

ಷರತ್ತುಗಳು:-

1. ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು ಸರ್ಕಾರಿ ಮತ್ತು ಇಲಾಖಾ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ನೇಮಕಾತಿಗಳನ್ನು ಸರ್ಕಾರಿ ಆದೇಶದ ಪ್ರಕಾರ ಮಾಡತಕ್ಕದ್ದು.
3. ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
4. ಅವಧಿ ಮುಗಿದಿರುವ ಸ್ಥಿರನಿಧಿಯನ್ನು ನವೀಕರಿಸಿಕೊಳ್ಳಬೇಕು.
5. ಅನುದಾನ ಸಂಹಿತೆ ಪ್ರಕಾರ ಶಾಲೆಯ ಎಲ್ಲಾ ಅವಶ್ಯಕತೆಗಳನ್ನು ಆಡಳಿತ ಮಂಡಳಿಯವರು ತಕ್ಷಣ ಪೂರೈಸಬೇಕು.
6. ಶಾಲಾ ಕಟ್ಟಡ ಬೆಂಕಿ ಹಾಗೂ ವಿದ್ಯುತ್ ಅವಘಡಗಳಿಂದ ಮುಕ್ತ ಮಾಡಲು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳತಕ್ಕದ್ದು. ಅಗ್ನಿಶಾಮಕಗಳನ್ನು ಅಳವಡಿಸುವುದು.
7. ನಿಗಧಿತ ವಿದ್ಯಾರ್ಹತೆ ಹೊಂದಿದ ಶಿಕ್ಷಕರಿಂದ ಮಾತ್ರ ಬೋಧನಾ ಚಟುವಟಿಕೆಗಳನ್ನು ನಡೆಸತಕ್ಕದ್ದು.
8. ಮಕ್ಕಳ ರಕ್ಷಣೆ/ಸುರಕ್ಷತೆ ಬಗ್ಗೆ ಕ್ರಮ ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ.
9. ಶಾಲಾ ಕಟ್ಟಡ ನಿರ್ಮಾಣ/ಕಟ್ಟಡದ ಮೇಲೆ ಕೊಠಡಿ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳನ್ನು ಶಾಲಾ ಅವಧಿಯ ದಿನಗಳಲ್ಲಿ ಕೈಗೆತ್ತಿಕೊಳ್ಳಬಾರದು
10. ಶಾಲಾ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಅವರ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯ ಕನಿಷ್ಠ ವೇತನ ನೀಡುವುದು.ಬ್ಯಾಂಕ್ ಮೂಲಕ ವೇತನ ಪಾವತಿಸುವುದು ಹಾಗೂ ಸೇವಾ ಭದ್ರತೆ ಒದಗಿಸುವುದುಕಡ್ಡಾಯವಾಗಿರುತ್ತದೆ.
11. ಶಾಲೆಯಲ್ಲಿ ಕಡ್ಡಾಯವಾಗಿ “ಅಗ್ನಿನಂದಕ” ಅಳವಡಿಸುವುದು.
12. ಕಟ್ಟಡದ ಬಗ್ಗೆ ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005ರಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.
13. ಶಿಕ್ಷಣ ಕಾಯ್ದೆಯನ್ವಯ ವಿದ್ಯಾರ್ಥಿಗಳ ಸಂಖ್ಯೆ ಇರಬೇಕು ಮತ್ತು ಇಲಾಖೆಯು ನಿಗಧಿಪಡಿಸಿರುವ ಪಠ್ಯಕ್ರಮಗಳನ್ನು ಅನುಸರಿಸಬೇಕು ಹಾಗೂ ಬೋಧಿಸಬೇಕು ಹಾಗೂ ಅಗತ್ಯವಾದ ಸ್ಥಳಾವಕಾಶ, ಪಾಠೋಪಕರಣ, ಪೀಠೋಪಕರಣ ಹಾಗೂ ಆಟದ ಮೈದಾನ ಇವುಗಳನ್ನು ಒದಗಿಸಬೇಕು.
14. ನಿಯಮಾನುಸಾರ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಆಡಿಟ್ ರಿಪೋರ್ಟ್ ಸಲ್ಲಿಸಿ ಅನುಮೋದನೆ ಪಡೆದಿರಬೇಕು.
15. ಕರ್ನಾಟಕ ಶಿಕ್ಷಣ ಕಾಯ್ದೆಯನ್ವಯ ಎಲ್ಲಾ ಮಾನ್ಯತೆ ನಿಯಮಗಳನ್ನು ಪಾಲಿಸತಕ್ಕದ್ದು. ತಪ್ಪಿದಲ್ಲಿ ನಿಯಮಾನುಸಾರ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುವುದು.
16. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ 2009 ಅಧಿನಿಯಮದ ಪ್ರಕಾರ ಮತ್ತು ನಿಯಮಾನುಸಾರ ಮಕ್ಕಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
17. ಶಾಲಾ ಮಾಹಿತಿ ಹಾಗೂ ಶಾಲಾ ವಿದ್ಯಾರ್ಥಿಗಳ ಶುಲ್ಕದ ಬಗ್ಗೆ “6'x10' ಫಲಕದಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ಪ್ರಕಟಿಸುವುದು.
18. ಮಾನ್ಯ ನಿರ್ದೇಶಕರು(ಪ್ರೌಢ ಶಿಕ್ಷಣ) ರವರ ಜ್ಞಾಪನಾ ಪತ್ರ ಸಂಖ್ಯೆ: ಸಿ8(7)ಶಾಶಿಅ.ಮಾ.ನ/1/2015-16, ದಿನಾಂಕ:11-9-2018ರಂತೆ ಕೂಡಲೇ ಆನ್ ಲೈನ್ ನಲ್ಲಿ ಮಾಹಿತಿ ಭರ್ತಿ ಮಾಡಿ ವರದಿ ಸಲ್ಲಿಸಲು ಕ್ರಮ ವಹಿಸುವ ಷರತ್ತಿಗೊಳಪಟ್ಟು ಮಾನ್ಯತೆ ನೀಡಿದೆ.

(ಎಸ್.ರಾಜೇಂದ್ರ)
ಉಪನಿರ್ದೇಶಕರು(ಆಡಳಿತ)
ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರತಿಯನ್ನು:-

1) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಂಗಳೂರು ದಕ್ಷಿಣ ವಲಯ-1. ಬೆಂಗಳೂರು ದಕ್ಷಿಣ ಜಿಲ್ಲೆ ರವರಿಗೆ ಮಾಹಿತಿಗಾಗಿ.
2) ಕಾರ್ಯದರ್ಶಿಗಳು ವಾಸವಿ ಎಜುಕೇಷನಲ್ ಟ್ರಸ್ಟ್, ನಂ.18, 14ನೇ ಮುಖ್ಯರಸ್ತೆ, 2ನೇ ಹಂತ, ಜೆ.ಪಿ.ನಗರ, ಬೆಂಗಳೂರು-78ರವರಿಗೆ
3) ಮುಖ್ಯೋಪಾಧ್ಯಾಯರು, ವಿ.ಇ.ಟಿ ಆಂಗ್ಲ ಪ್ರೌಢ ಶಾಲೆ, ಜೆ.ಪಿ.ನಗರ, ಬೆಂಗಳೂರು
4) ಕಛೇರಿ ಪ್ರತಿ.

V.E.T. SCHOOL
No.18, 14th Main,
J.P. Nagar 2nd Phase, Bangalore-560 078.
Phone: 080-26585623

For V.E.T. SCHOOL
H. Usha
Principal